ಕರ್ನಾಟಕ ಸರ್ಕಾರ

# ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 26–3–2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ :<br><br>ಉದ್ಘಾಟನೆ:<br><br>ಶ್ರೀಮತಿ ಭವ್ಯ,<br>ಚಲನಚಿತ್ರ ನಟಿ,<br><br>ಮುಖ್ಯ ಅತಿಥಿಗಳು:<br><br>ಶ್ರೀ ಆರ್. ರೋಷನ್ ಬೇಗ್,<br>ಮೂಲಸೌಲಭ್ಯ ಅಭಿವೃದ್ಧಿ ವಾರ್ತಾ ಹಾಗೂ ಹಜ್ ಸಚಿವರು.<br><br>ಶ್ರೀ ಬಿ. ರಮಾನಾಥ್ ರೈ,<br>ಅರಣ್ಯ ಸಚಿವರು.<br><br>ಶ್ರೀ ಡಿ.ಕೆ. ಶಿವಕುಮಾರ್,<br>ಇಂಧನ ಸಚಿವರು. | 27–03–2015<br>ಶುಕ್ರವಾರ<br>ಬೆಳಿಗ್ಗೆ<br>10–00 ಗಂಟೆಗೆ | ಮಹಾತ್ಮ ಗಾಂಧಿ ಸ್ಮಾರಕ ನಿಧಿ,<br>(ಗಾಂಧಿ ಭವನ)<br>ಕುಮಾರ್ ಪಾರ್ಕ್ ಈಸ್ಟ್,<br>ಬೆಂಗಳೂರು. |
| 2. | ಪತ್ರಿಕಾಗೋಷ್ಠಿ:<br><br>ಶ್ರೀಮತಿ ಭಾವನ ರಾಮಣ್ಣ,<br>ಅಧ್ಯಕ್ಷರು,<br>ಬಾಲಭವನ ಸೊಸೈಟಿ, ಬೆಂಗಳೂರು. | 27–03–2015<br>ಶುಕ್ರವಾರ<br>ಬೆಳಿಗ್ಗೆ<br>11–00 ಗಂಟೆಗೆ | ಹುಟ್ಟುಹಬ್ಬ ಆವರಣ,<br>ಬಾಲಭವನ ಸೊಸೈಟಿ,<br>ಕಬ್ಬನ್ ಉದ್ಯಾನವನ, ಬೆಂಗಳೂರು. |
| 3. | ಪತ್ರಿಕಾಗೋಷ್ಠಿ:<br><br>ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಂದ | 27–03–2015<br>ಶುಕ್ರವಾರ<br>ಸಂಜೆ<br>4–00 ಗಂಟೆಗೆ | ಮಂಡಳಿಯ ಸಭಾಂಗಣ,<br>ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ,<br>ಮಲ್ಲೇಶ್ವರಂ,<br>ಬೆಂಗಳೂರು – 560 003 |

| | | | |
|---|---|---|---|
| 4. | ಟೀಯೆಸ್ಸಾರ್ ಸ್ಮಾರಕ, ಮೊಹರೆ ಹಣಮಂತರಾಯ, ಅಭಿವೃದ್ಧಿ ಹಾಗೂ ಪರಿಸರ ಪತ್ರಿಕೋದ್ಯಮ ಪ್ರಶಸ್ತಿ ಪ್ರದಾನ ಸಮಾರಂಭ.<br><br>ಪ್ರಶಸ್ತಿ ಪ್ರದಾನ:<br><br>ಶ್ರೀ ಸಿದ್ಧರಾಮಯ್ಯ,<br>ಮುಖ್ಯ ಮಂತ್ರಿಗಳು.<br><br>ಅಧ್ಯಕ್ಷತೆ:<br><br>ಶ್ರೀ ಆರ್. ರೋಷನ್ ಬೇಗ್,<br>ಮೂಲಸೌಲಭ್ಯ ಅಭಿವೃದ್ಧಿ ವಾರ್ತಾ ಹಾಗೂ ಹಜ್ ಸಚಿವರು.<br><br>ಮುಖ್ಯ ಅತಿಥಿಗಳು:<br><br>ಶ್ರೀ ರಾಮಲಿಂಗಾ ರೆಡ್ಡಿ,<br>ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಹಾಗೂ ಸಾರಿಗೆ ಸಚಿವರು,<br><br>ಶ್ರೀ ಪಿ. ಸಿ. ಮೋಹನ್,<br>ಲೋಕಸಭಾ ಸದಸ್ಯರು<br>ಬೆಂಗಳೂರು ಕೇಂದ್ರೀಯ,<br><br>ನ್ಯಾಯಮೂರ್ತಿ ಶ್ರೀ ಅರಳಿ ನಾಗರಾಜ್,<br>ಕರ್ನಾಟಕ ಉಚ್ಛ ನ್ಯಾಯಾಲಯದ ವಿಶ್ರಾಂತ ನ್ಯಾಯಾಧೀಶರು ಹಾಗೂ 2012-2013 ನೇ ಪತ್ರಿಕೋದ್ಯಮ ಪ್ರಶಸ್ತಿಗಳ ಆಯ್ಕೆ ಸಮಿತಿ ಅಧ್ಯಕ್ಷರು.<br><br>ಶ್ರೀ ಎಂ. ಎ. ಪೊನ್ನಪ್ಪ,<br>ಅಧ್ಯಕ್ಷರು<br>ಕರ್ನಾಟಕ ಮಾಧ್ಯಮ ಅಕಾಡೆಮಿ | 27-03-2015<br>ಶುಕ್ರವಾರ<br>ಸಂಜೆ<br>6-00 ಗಂಟೆಗೆ | ಸುಲೋಚನಾ ಸಭಾಂಗಣ,<br>ನಂ. 17, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,<br>ಭಗವಾನ್ ಮಹಾವೀರ ರಸ್ತೆ,<br>ಬೆಂಗಳೂರು – 560 001 |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ವಿಧಾನ ಮಂಡಲದ ಸುದ್ದಿಗಳು:

### ಲಿಖಿತ ಉತ್ತರ ನೀಡಲು ತಡಮಾಡುವ ಅಧಿಕಾರಿಗಳ ಮೇಲೆ ಕ್ರಮ

**ಬೆಂಗಳೂರು, ಮಾರ್ಚ್ 26 (ಕರ್ನಾಟಕ ವಾರ್ತೆ)**

ಸದಸ್ಯರು ಕೇಳಿರುವ ಲಿಖಿತ ಪ್ರಶ್ನೆಗೆ ಉತ್ತರ ನೀಡಲು ತಡಮಾಡುವ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲಾಗುವುದೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನ ಪರಿಷತ್ತಿನಲ್ಲಿಂದು ತಿಳಿಸಿದರು.

ವಿಧಾನ ಪರಿಷತ್ತಿನಲ್ಲಿಂದು ಸಭಾಧ್ಯಕ್ಷ ಎಸ್.ಆರ್. ಪಾಟೀಲ್ ಅವರು ಸದನದಲ್ಲಿ 154 ಲಿಖಿತ ಪ್ರಶ್ನೆಗಳಲ್ಲಿ 51 ಪ್ರಶ್ನೆಗಳಿಗೆ ಉತ್ತರ ನೀಡಲಾಗಿದೆಯೆಂದು ಮಂಡಿಸಿದಾಗ ವಿರೋಧ ಪಕ್ಷದ ನಾಯಕ ಕೆ.ಎಸ್. ಈಶ್ವರಪ್ಪ ಅವರು ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡಲು ಅಧಿಕಾರಿಗಳು ಉದಾಸೀನ ಮಾಡುತ್ತಿದ್ದಾರೆಂದು ಗಮನ ಸೆಳೆದ ಹಿನ್ನೆಲೆಯಲ್ಲಿ ಮಾತನಾಡಿದ ಮುಖ್ಯಮಂತ್ರಿಯವರು ತಾವು ಯಾವ ಯಾವ ಇಲಾಖೆಗಳಿಂದ ಇದುವರೆಗೂ ಉತ್ತರಗಳು ಬಂದಿಲ್ಲ, ಅದಕ್ಕೆ ಕಾರಣವೇನೆಂಬ ಮಾಹಿತಿಯನ್ನು ತರಿಸಿಕೊಂಡು ಪರಿಶೀಲಿಸುತ್ತೇನೆ. ಸಕಾರಣವಿಲ್ಲದ ಉತ್ತರ ನೀಡಲು ವಿಳಂಬ ಮಾಡಿರುವ ಅಧಿಕಾರಿಗಳ ಮೇಲೆ ಸೂಕ್ತಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಬಾಬು:ಪೂರ್ಣಿಮ:ಜಿಪಿಆರ್.

### ನಿವೃತ್ತಿ ವೇತನ ಬಿಡುಗಡೆಗೆ ಕ್ರಮ

**ಬೆಂಗಳೂರು, ಮಾರ್ಚ್ 26 (ಕರ್ನಾಟಕ ವಾರ್ತೆ)**

ನಿವೃತ್ತ ಕೆ.ಎ.ಎಸ್. ಅಧಿಕಾರಿ ಸುಬ್ರಾಯ ಕಾಮತ್ ಅವರ ನಿವೃತ್ತಿ ವೇತನ ಬಿಡುಗಡೆಗೆ ಕ್ರಮವಹಿಸಲಾಗುವುದೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ವಿಧಾನ ಪರಿಷತ್ತಿನ ಶೂನ್ಯ ವೇಳೆಯಲ್ಲಿ ಸದಸ್ಯ ಕೋಟ ಶ್ರೀನಿವಾಸ ಪೂಜಾರಿ ಅವರು ದಿನ ಪತ್ರಿಕೆಯಲ್ಲಿ ದಕ್ಷ, ಪ್ರಾಮಾಣಿಕ ಅಧಿಕಾರಿಯಾಗಿದ್ದ ಸುಬ್ರಾಯ್ ಅವರು 2013 ರಲ್ಲಿ ನಿವೃತ್ತಿ ಹೊಂದಿದ್ದರೂ ಇದುವರೆವಿಗೆ ನಿವೃತ್ತಿ ವೇತನ ನೀಡದೆ ತಡೆಹಿಡಿಯಲಾಗಿರುವ ಬಗ್ಗೆ ಪ್ರಸ್ತಾಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಗಳು ಶ್ರೀಯುತರು ಹುಣಸೂರು ಪುರಸಭೆಯಲ್ಲಿ ಆಡಳಿತ ಅಧಿಕಾರಿಯಾಗಿದ್ದ ಸಂದರ್ಭದಲ್ಲಿ ನಡೆದಿದೆಯೆನ್ನಲಾದ ವಿಚಾರವೊಂದು ತನಿಖೆಯಲ್ಲಿರುವ ಕಾರಣ ಇವರ ನಿವೃತ್ತಿ

ವೇತನವನ್ನು ತಡೆಹಿಡಿಯಲಾಗಿದೆ ಎಂದು ತಿಳಿದು ಬಂದಿದೆ. ಇವರ ಕಡತಗಳನ್ನು ತರಿಸಿಕೊಂಡು ಕೂಡಲೇ ಪರಿಶಿಲನೆ ನಡೆಸುವ ಮೂಲಕ ತಡೆಹಿಡಿಯಲಾಗಿರುವ ಅವರ ನಿವೃತ್ತಿ ವೇತನ ಬಿಡುಗಡೆಗೆ ಕ್ರಮವಹಿಸಲಾಗುವುದೆಂದು ಭರವಸೆ ನೀಡಿದರು.

ಬಾಬು:ಪೂರ್ಣಿಮ:ಜಿಪಿಆರ್.

## ಧನ ವಿನಿಯೋಗ ವಿಧೇಯಕ ಅನುಮೋದನೆ

**ಬೆಂಗಳೂರು, ಮಾರ್ಚ್ 26 (ಕರ್ನಾಟಕ ವಾರ್ತೆ)**

ವಿಧಾನ ಸಭೆಯೀಮದ ಅಂಗೀಕೃತವಾದ ರೂಪದಲ್ಲಿರುವ 2015ನೇ ಸಾಲಿನ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ವಿಧಾನ ಪರಿಷತ್ತಿನಲ್ಲಿ ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

ವಿಧಾನ ಪರಿಷತ್ತಿನಲ್ಲಿಂದು ಹಣಕಾಸು ಖಾತೆಯನ್ನು ಹೊಂದಿರುವ ಮುಖ್ಯಮಂತ್ರಿಯವರು 4713 ಕೋಟಿ ರೂ ಮೊತ್ತದ ವಿಧೇಯಕವನ್ನು ಅಂಗೀಕರಿಸುವಂತೆ ಸೂಚಿಸಿದರು.

ವಿಧೇಯಕವನ್ನು ಸಭಾಪತಿ ಡಾ. ಹೆಚ್. ಶಂಕರಮೂರ್ತಿ ಅವರು ಧ್ವನಿ ಮತಕ್ಕೆ ಹಾಕುವ ಮೂಲಕ ವಿಧೇಯಕ ಅಂಗೀಕಾರವಾಗಿದೆ ಎಂದು ಪ್ರಕಟಿಸಿದರು.

ಬಾಬು:ಪೂರ್ಣಿಮ:ಜಿಪಿಆರ್.

## ಮೂರು ತಿಂಗಳಲ್ಲಿ ಕಾಮಗಾರಿ ಪೂರ್ಣ

**ಬೆಂಗಳೂರು, ಮಾರ್ಚ್ 26 (ಕರ್ನಾಟಕ ವಾರ್ತೆ)**

ಹೆಬ್ಬಾಳದ ರಾಜಕಾಲುವೆ ಒಳಗಡೆ ಜೀರೋ ಸಿವೇಜ್ ಲೈನ್ ಅಳವಡಿಕೆ ಕಾಮಗಾರಿಯನ್ನು ಇನ್ನೂ ಮೂರು ತಿಂಗಳಲ್ಲಿ ಪೂರ್ಣಗೊಳಿಸಲಾಗುವುದೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ವಿಧಾನಪರಿಷತ್ತಿನ ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯೆ ಡಾ. ಜಯಮಾಲ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ ಈ ರಾಜ ಕಾಲುವೆಯಲ್ಲಿ ಮಳೆ ನೀರಿನ ಜೊತೆಗೆ ತ್ಯಾಜ್ಯ ನೀರು ಹರಿಯುವುದನ್ನು ತಪ್ಪಿಸುವ ಸಲುವಾಗಿ 18 ಕಿಲೋ ಮೀಟರ್‌ನಷ್ಟು ಜೀರೋ ಸೀವೇಜ್ ಲೈನ್ ಅಳವಡಿಸಲಾಗುತ್ತಿದ್ದು, ಬಹುಪಾಲು ಕಾಮಗಾರಿಯು ಈಗಾಗಲೇ ಮುಗಿದಿದೆ. ಸೀವೇಜ್ ಲೈನ್‌ಗಳಿಗೆ ಹೆಚ್ಚುವರಿ 800 ಮೀಟರ್ ಸ್ಯಾನಿಟರಿ ಲೈನ್‌ಗಳನ್ನು ಜೋಡಣೆ ಮಾಡುವ ಕಾಮಗಾರಿಯು ಪ್ರಗತಿಯಲ್ಲಿದೆ ಎಂದರು.

45 ಕೋಟಿ ರೂ ವೆಚ್ಚದಲ್ಲಿ ಈ ಯೋಜನೆಯನ್ನು 2010 ರಲ್ಲಿ ಪ್ರಾರಂಭಿಸಲಾಯಿತು. ನಮ್ಮ ಸರ್ಕಾರ ಬಂದ ನಂತರ ಕಾಮಗಾರಿಯನ್ನು ಶೀಘ್ರದಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಬಾಬು:ಪೂರ್ಣಿಮ:ಜಿಪಿಆರ್.

# ವೈಜ್ಞಾನಿಕ ಹಂದಿ ಸಾಕಾಣಿಕೆ ತರಬೇತಿ

ಬೆಂಗಳೂರು, ಮಾರ್ಚ್ 26 (ಕರ್ನಾಟಕ ವಾರ್ತೆ)

ಹಂದಿ ಸಂವರ್ಧನಾ ಕೇಂದ್ರ, ಹೆಸರಘಟ್ಟ, ಬೆಂಗಳೂರು –560 089 ಇಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖಾವತಿಯಿಂದ ದಿನಾಂಕ: 30–3–2015 ರಿಂದ 1–4–2015 ರವರೆಗೆ 3 ದಿನಗಳ "ವೈಜ್ಞಾನಿಕ ಹಂದಿ ಸಾಕಾಣಿಕೆ" ತರಬೇತಿ ಏರ್ಪಡಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ತಮ್ಮ ಗುರುತಿನ ಚೀಟಿ ಹಾಗೂ ಇತ್ತೀಚಿನ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳನ್ನು ತರಬೇಕಾಗಿದೆ. ಹೆಚ್ಚಿನ ಮಾಹಿತಿಗಾಗಿ 080– 28466456 ನ್ನು ಸಂಪರ್ಕಿಸಬಹುದು.

ಬಾಬು/ಕೆಎಂ

# ಸಾರಿಗೆ ಅದಾಲತ್

ಬೆಂಗಳೂರು, ಮಾರ್ಚ್ 26 (ಕರ್ನಾಟಕ ವಾರ್ತೆ)

ಬೆಂಗಳೂರು ಎಲೆಕ್ಟ್ರಾನಿಕ್ ಸಿಟಿ ಉಪ ಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿ ವರ ಕಚೇರಿಯಲ್ಲಿ ಏಪ್ರಿಲ್ 6 ರಂದು ಮಧ್ಯಾಹ್ನ 3–00 ಗಂಟೆಗೆ ಸಾರಿಗೆ ಅದಾಲತ್‌ನ್ನು ಏರ್ಪಡಿಸಲಾಗಿದೆ.

ಈ ಕಚೇರಿ ವ್ಯಾಪ್ತಿಗೆ ಬರುವ ಸಾರ್ವಜನಿಕರಿಂದ ಸಾರಿಗೆ ಇಲಾಖೆಗೆ ಸಂಬಂಧಿಸಿದ ಕುಂದುಕೊರತೆಗಳನ್ನು ಕೇಳಲಾಗುವುದು.

ಬಾಬು:ಜಿಪಿಆರ್.

# ನ್ಯಾಯಾಂಗ ವೃಂದದ ಹುದ್ದೆಗೆ ಅರ್ಜಿ ಆಹ್ವಾನ

ಬೆಂಗಳೂರು, ಮಾರ್ಚ್ 26 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ಖಾಲಿ ಇರುವ ನ್ಯಾಯಾಂಗ ವೃಂದದ ಒಂದು ಸದಸ್ಯರ ಹುದ್ದೆಯನ್ನು ಹಾಗೂ ವಿವಿಧ ಜಿಲ್ಲಾ ವೇದಿಕೆಗಳಲ್ಲಿ ಖಾಲಿಯಿರುವ ಹಾಗೂ ಖಾಲಿಯಾಗಲಿರುವ 22 ಅಧ್ಯಕ್ಷರ, 16 ಮಹಿಳಾ ಸದಸ್ಯರ ಹಾಗೂ 17 ಪುರುಷ ಸದಸ್ಯರ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ತತ್ಸಂಬಂಧವಾಗಿ ದಿನಾಂಕ 16–03–2015 ರಂದು ವಿಶೇಷ ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ.

ಬಾಬು:ಜಿಪಿಆರ್.

Photo Caption:

Dr.N.Rajiv Shetty, former Director of Medical Education, Government of Karnataka was conferred with Doctor of Sciences (DSc), Award the occasion of the 17$^{th}$ convocation of Rajiv Gandhi University of Health Sciences. His Excellency Sri Vajubai Rudabhai Vala, Governor of Karnataka, presented the award. Padmabhusan Dr. K.Radhakrishnan, Former Chairman, ISRO was also present.

ಛಾಯಾಚಿತ್ರ ಶೀರ್ಷಿಕೆ:

DSC 5226

ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ 17ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಶ್ರೀ ವಾಜುಬಾಯಿ ರೂಢಬಾಯಿ ವಾಲಾ ಅವರು ವೈದ್ಯಕೀಯ ಶಿಕ್ಷಣದ ನಿವೃತ್ತ ನಿರ್ದೇಶಕ ಡಾ: ಎನ್. ರಾಜೀವ್‌ಶೆಟ್ಟಿ ಅವರಿಗೆ ಡಾಕ್ಟರ್ ಆಫ್ ಸೈನ್ಸ್ ಪ್ರದಾನ ಮಾಡಿದರು.